ಕರ್ನಾಟಕ ರಾಜ್ಯ ಪೊಲೀಸ್

ಪ್ರಥಮ ವರ್ತಮಾನ ವರದಿ

(ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ 173ರ ಕೆಳಗೆ)

ಘನ ನ್ಯಾಯಾಲಯ : 2ND ADDITIONAL SENIOR CIVIL JUDGE & C.J.M. COURT, MANGALORE CITY.

1. **ಜಿಲ್ಲೆ :** Mangaluru City **ವೃತ್ತ/ಉಪ ವಿಭಾಗ :** Central Sub Division **ಪೊಲೀಸ್ ಠಾಣೆ :** Mangalore South PS

   ಅಪರಾಧ ಸಂಖ್ಯೆ : 231/2026 **ಪ್ರ.ವ.ವ. ದಿನಾಂಕ :** 05/11/2026

2. **ಕಾಯ್ದೆ ಮತ್ತು ಕಲಂಗಳು :** THE BHARATIYA NYAYA SANHITA (BNS), 2023, (U/S 126(2),127(2),352,351(2),118(1),309(6),309(4),308(3),308(2),3(5))

3. **(a) ಕೃತ್ಯ ನಡೆದ ದಿನ :** Intervening Days **ದಿನಾಂಕ ದಿಂದ :** 25/08/2026 **ದಿನಾಂಕ ವರೆಗೆ :** 04/11/2026

   ವೇಳೆಯಿಂದ : 22:00:00 **ವೇಳೆಯವರೆಗೆ :** 22:45:00

   (b) ಠಾಣೆಯಲ್ಲಿ ವರ್ತಮಾನ ಸ್ವೀಕರಿಸಿದ ದಿನಾಂಕ : 05/11/2026 **ಬರವಣಿಗೆಯಲ್ಲಿ/ಹೇಳಿಕೆ :** Written 18:30:00

   (c) ಪಿರ್ಯಾದುದಾರ / ಬಾತ್ಮೀದಾರ ತಡವಾಗಿ ವರದಿ ಮಾಡಿದಕ್ಕೆ ಕಾರಣಗಳು :

   ಪಿರ್ಯಾದುದಾರರು ತನಗೆ ಆದ ತೊಂದರೆಯನ್ನು , ಅವರ ಮೆನೇಜರ್ ಆದ ಅಜಿತ್‌ರವರಿಗೆ ತಿಳಿಸಿದ್ದು ಅವರು ಪೊಲೀಸ್ ಸ್ಟೇಷನ್‌ಗೆ ದೂರು ನೀಡುವಂತೆ ಪಿರ್ಯಾದುದಾರರಿಗೆ ಧೈರ್ಯ ಹೇಳಿದಂತೆ ತಡವಾಗಿ ಈ ದಿನ ದೂರು ನೀಡಿರುವುದಾಗಿದೆ.

   (d) ಜನರಲ್ ಡೈರಿ ಉಲ್ಲೇಖ ಸಂಖ್ಯೆ ಮತ್ತು ಸಮಯ : 34, 19:51:00

4. **(a) ಕೃತ್ಯ ನಡೆದ ಸ್ಥಳ :**

   gate of the neharu ground located in front of the Nandini milk booth near RTO Mangalore , , , Mangaluru City, Karnataka,

   (b) ಪೊಲೀಸ್ ಠಾಣೆ ಯಿಂದ ಇರುವ ದಿಕ್ಕು ಮತ್ತು ದೂರ : Towards South 1.0 Km Mangalore South PS

   (c) ಗ್ರಾಮ : PANDESHWARA **ಗಸ್ತಿನ ಹೆಸರು :** BEAT I

   (d) ಸ್ಥಳವು ಬೇರೆ ಪೊಲೀಸ್ ಠಾಣೆ ವ್ಯಾಪ್ತಿಗೆ ಬರುವಂತಹದ್ದು ಆದರೆ ಆ ಪೊಲೀಸ್ ಠಾಣೆಯ ಹೆಸರು :

   ಜಿಲ್ಲೆ :

5. **ಪಿರ್ಯಾದುದಾರ / ಬಾತ್ಮೀದಾರ :**

   (a) ಹೆಸರು : Ravi Raja **ತಂದೆ/ಗಂಡನ ಹೆಸರು :** Krishnappa

   (b) ವಯಸ್ಸು : 39 **(c) ವೃತ್ತಿ :** Electrician

   (d) ಧರ್ಮ : **(e) ಜಾತಿ :**

   (f) ಇ-ಮೇಲ್ : r41851081@gmail.com **(g) ದೂರವಾಣಿ :** 6362683962

   (h) ಲಿಂಗ : Male **(i) ರಾಷ್ಟ್ರೀಯತೆ :** India

   (j) ಪಾಸ್ ಪೋರ್ಟ್ ಸಂಖ್ಯೆ : **ನೀಡಿದ ದಿನಾಂಕ :**

   (k) ವಿಳಾಸ : Abhiri House, Vitla Mudnur Kambalbettu Post Office, Bantwala Taluk, , , Mangaluru City, Karnataka,

   (l) ಪಿರ್ಯಾದುದಾರ ಖುದ್ದಾಗಿ ನೋಡಿದ್ದರೆ ಅಥವಾ ಕೇಳಿಸಿಕೊಂಡಿದ್ :

   Seen

6. **ಗೊತ್ತಿರುವ/ಅನುಮಾನಿತ /ಅಪರಿಚಿತ ವ್ಯಕ್ತಿಯ ಪೂರ್ತಿ ವಿವರಗಳು :**

ಸ.ನಂ	ಹೆಸರು / ತಂದೆಯ ಹೆಸರು / ಜಾತಿ / ವಿಳಾಸ	ವಿಧ	ವ್ಯಕ್ತಿಯ ವಿಧ	ಲಿಂಗ	ವಯಸ್ಸು	ವೃತ್ತಿ
1	shivaraj (A1) / South Police station Mangaluru City Karnataka	Accused	Police	Male		
2	Hiranna Benni (A2) / CAR MANGALORE Mangaluru City Karnataka	Accused	Police	Male		
3	Umanath (A3) / South Police Station Mangalore Mangaluru City Karnataka	Accused	Police	Male		

7. ನೊಂದವರ ವಿವರಗಳು :

ಸ.ನಂ	ಹೆಸರು	ವಿಳಾಸ	ಗಾಯದ ವಿಧ	ಲಿಂಗ	ವಯಸ್ಸು	ವೃತ್ತಿ
1	Ravi Raja	Abhiri House, Vitla Mudnur Kambalbettu Post Office, Bantwala Taluk Mangaluru City Karnataka	Not Applicable	Male	39	Electrician

8. ಕಳುವಾಗಿರುವ / ಬಾಗಿಯಾಗಿರುವ ಸ್ವತ್ತುಗಳ ವಿವರಗಳು :

ಕಳುವಾಗಿರುವ / ಬಾಗಿಯಾಗಿರುವ ಸ್ವತ್ತುಗಳ ಮೌಲ್ಯ :

9. ಪಂಚನಾಮ ವರದಿ / ಯು.ಡಿ. ಕೇಸ್. ಸಂಖ್ಯೆ :

10. ಪ್ರಥಮ ವರ್ತಮಾನ ವರದಿಯ ವಿವರಗಳು :

ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ, ಪಿರ್ಯಾದಿದಾರರು ವಿಟ್ಲ ಮುಡ್ನೂರು ನಿವಾಸಿಯಾಗಿದ್ದು ಪ್ರಸ್ತುತ ಮಂಗಳೂರು ಪಾಂಡೇಶ್ವರದ ಶಿವನಗರ ಎಂಬಲ್ಲಿ ಬಾಡಿಗೆ ಮನೆಯಲ್ಲಿ ವಾಸಮಾಡಿಕೊಂಡು ಕಂಕನಾಡಿಯಲ್ಲಿರುವ ಅಲ್ಲೂರ ಬಿಲ್ಡಂಗ್‌ನಲ್ಲಿ ಎಲೆಕ್ಟ್ರೀಷಿಯನ್ ಆಗಿ ಕೆಲಸ ಮಾಡಿಕೊಂಡಿರುತ್ತಾರೆ ದಿನಾಂಕ: 25-08-2026 ರಂದು ರಾತ್ರಿ 10-00 ಗಂಟೆಗೆ ನೆಹರು ಮೈದಾನಲ್ಲಿ ವಾಕಿಂಗ್ ಮುಗಿಸಿ ಪಿರ್ಯಾದುದಾರರು ಅವರ ಮನೆಯ ಕಡೆಗೆ ನಡೆದುಕೊಂಡು ಹೋಗುತ್ತಾ, ಆರ್.ಟಿ.ಓ ಬಳಿ ಇರುವ ನಂದಿನಿ ಹಾಲಿನ ಬೂತ್‌ನ ಮುಂಭಾಗದಲ್ಲಿರುವ ಮೈದಾನದ ಗೇಟ್‌ನ ಬಳಿ ತಲುಪಿದಾಗ ಹೊಯ್ಸಳ ವಾಹನದಲ್ಲಿ ಬಂದು ಅದರ ಚಾಲಕರಾದ ಹಿರಣ್ಣ ಬೆನ್ನಿ ಮತ್ತು ಶಿವರಾಜ್ ಪೊಲೀಸ್ ಸಿಬ್ಬಂದಿಯವರು ಪಿರ್ಯಾದುದಾರರನ್ನು ತಡೆದು ನಿಲ್ಲಿಸಿ, ಶಿವರಾಜ್ ರವರ ಕೈಯಲ್ಲಿದ್ದ ಬೆತ್ತದಿಂದ ಪಿರ್ಯಾದಿದಾರರ ಭುಜಕ್ಕೆ ಮತ್ತು ಕಾಲಿಗೆ ಹೊಡೆದು, ಪಿರ್ಯಾದಿದಾರರ ಚಡ್ಡಿಯ ಕಿಸೆಯಿಂದ ಮೊಬೈಲ್‌ನ್ನು ತೆಗೆದು, ಮೊಬೈಲ್ ಕವರ್‌ನಲ್ಲಿ ಇದ್ದ 300/- ರೂಪಾಯಿ ಹಣವನ್ನು ಬಲತ್ಕಾರವಾಗಿ ಕಸಿದು, "ನೀನು ಮೈದಾನಕ್ಕೆ ಚೀಪಲು ಬರುವುದಾ, ತಿಕ ಕೊಡಲು ಬರುವುದಾ, ಬೇವರ್ಸಿ, ರಂಡೆ ಮಗನೆ, ಎಂದು ಅವಾಚ್ಯ ಶಬ್ದಗಳಿಂದ ಬೈದು, ನೀನು ಇಲ್ಲಿಂದ ಹೋಗು, ಇನ್ನು ನೀನು ಇಲ್ಲಿ ಕಂಡರೆ ಜೈಲಿಗೆ ಹಾಕುತ್ತೇವೆ" ಎಂದು ಬೆದರಿಕೆ ಹಾಕಿ ಹೋಗಿರುತ್ತಾರೆ. ದಿನಾಂಕ: 27-8-2026 ರಂದು ಪಿರ್ಯಾದುದಾರರು ಅದೇ ಸ್ಥಳದಲ್ಲಿ ಹೊರಗಡೆ ಮಾರ್ಗದಲ್ಲಿ ನಡೆದುಕೊಂಡು ಹೋಗುವಾಗ, ರಾತ್ರಿ 9-30 ಗಂಟೆ ಸಮಯಕ್ಕೆ ಹೊಯ್ಸಳ ವಾಹನದಲ್ಲಿ ಬಂದ ಹಿರಣ್ಣ ಬೆನ್ನಿ ಮತ್ತು ಶಿವರಾಜ್ ರವರು ಪಿರ್ಯಾದುದಾರರನ್ನು ನೋಡಿ, ಅವರನ್ನು ತಡೆದು ನಿಲ್ಲಿಸಿ, ಅವರ ಬಳಿ ಬಂದು ಪುನಃ ಅವರ ಮೊಬೈಲ್ ಫೋನನ್ನು ಬಲತ್ಕಾರವಾಗಿ ಕಸಿದುಕೊಂಡು, ಮೊಬೈಲ್ ಕವರ್‌ನಲ್ಲಿದ್ದ ಕರ್ನಾಟಕ ಬ್ಯಾಂಕ್ ಮತ್ತು ಯೂನಿಯನ್ ಬ್ಯಾಂಕ್‌ನ 2 ಎ.ಟಿ.ಎಮ್ ಕಾರ್ಡ್, ರೂಪಾಯಿ 1000/- ನಗದು ಹಣ ಮತ್ತು ಪಿರ್ಯಾದಿದಾರರ ಮೋಟಾರು ಸೈಕಲ್‌ನ ಕೀಯನ್ನು ತೆಗೆದುಕೊಂಡು "ನೀನು ಇಲ್ಲಿಯೇ ಇರು, ನಾವು ವಾಪಾಸು ಬರುತ್ತೇನೆ "ಎಂದು ಹೇಳಿ ಹೋಗಿರುತ್ತಾರೆ. ನಂತರ, ರಾತ್ರಿ ಸುಮಾರು 11-30 ಗಂಟೆಗೆ ಹೊಯ್ಸಳ ವಾಹನದಲ್ಲಿ ವಾಪಾಸು ಬಂದು, ಪಿರ್ಯಾದಿದಾರರನ್ನು ಬಲತ್ಕಾರವಾಗಿ ಹೊಯ್ಸಳ ವಾಹನದಲ್ಲಿ ಕುಳ್ಳಿರಿಸಿ, ಇನ್ನೂ ಹೆಚ್ಚಿನ ಹಣದ ಬೇಡಿಕೆ ಇಟ್ಟಿರುತ್ತಾರೆ. ಅವಾಗ ಪಿರ್ಯಾದುದಾರರು ಅವರ ಬಳಿ ಹಣ ಇಲ್ಲ ಎ.ಟಿ.ಎಮ್ ಮಾತ್ರ ಇದೆ ಎಂದು ಹೇಳಿದಾಗ ಅವರು . ಪಿರ್ಯಾದಿದಾರರ ಮೊಬೈಲ್‌ನ ಪಾಸ್‌ವರ್ಡ್ ಪಡೆದು ಮೊಬೈಲ್‌ನಲ್ಲಿ ಪಿರ್ಯಾದಿದಾರರ ಬ್ಯಾಂಕ್ ಬ್ಯಾಲನ್ಸ್ ಚೆಕ್ ಮಾಡಿ, ಅದರಲ್ಲಿ ರೂಪಾಯಿ 5,000/- ಇರುವುದನ್ನು ಕಂಡು ರೂ 2000/- ಹಣ ನೀಡಬೇಕೆಂದು ಒತ್ತಾಯಿಸಿ, ಹಣ ನೀಡದೇ ಇದ್ದಲ್ಲಿ ಕೇಸ್ ಮಾಡಿ ಜೈಲಿಗೆ ಹಾಕುವುದಾಗಿ ಬೆದರಿಸಿರುತ್ತಾರೆ. ಪಿರ್ಯಾದಿದಾರರು ಅಷ್ಟು ಹಣ ನೀಡಲು ಆಗುವುದಿಲ್ಲ ನನಗೆ ಬ್ಯಾಂಕ್ ಲೋನ್ ಕಟ್ಟಲು ಇದೆ. ನಾನು ಯಾವುದೇ ತಪ್ಪು ಮಾಡಿರುವುದಿಲ್ಲ ನನ್ನನ್ನು ಬಿಟ್ಟುಬಿಡಿ ಎಂದು ಸಾಕಷ್ಟು ಬೇಡಿಕೊಂಡರೂ, ಬೀಡದೆ ಪಿರ್ಯಾದಿದಾರರನ್ನು ಹೊಯ್ಸಳ ವಾಹನದಲ್ಲಿ ಮಂಗಳಾದೇವಿ ದೇವಸ್ಥಾನದ ಬಳಿ ಇರುವ ಎಸ್.ಬಿ.ಐ ಬ್ಯಾಂಕ್‌ನ ಎ.ಟಿ.ಎಮ್ ಬಳಿ ಕರೆದುಕೊಂಡು ಹೋಗಿ, ಕರ್ನಾಟಕ ಬ್ಯಾಂಕ್‌ನ ಎ.ಟಿ.ಎಮ್‌ನ್ನು ಪಿರ್ಯಾದಿದಾರರಲ್ಲಿ ಕೊಟ್ಟು, ಹಣವನ್ನು ಎ.ಟಿ.ಎಮ್‌ನಿಂದ ಡ್ರಾ ಮಾಡಿಕೊಂಡುಬರುವಂತೆ ಬೆದರಿಕೆಗೆ ಹಾಕಿದಾಗ ರೂ 1000/- ಹಣವನ್ನು ಎ.ಟಿ.ಎಮ್‌ನಿಂದ ಡ್ರಾ ಮಾಡಿ ಹಾಗೂ ಪಿರ್ಯಾದಿದಾರರ ಮೊಬೈಲ್ ಫೋನ್ ಕವರಿನಲ್ಲಿದ್ದ

1000/- ವನ್ನು ಸೇರಿಸಿ 2000/- ರೂಪಾಯಿಯನ್ನು ನೀಡಿರುತ್ತಾರೆ. ಅವಾಗ , ಶಿವರಾಜ್ ರವರು ಪಿರ್ಯಾದಿದಾರರ ಮೊಬೈಲ್, ಯೂನಿಯನ್ ಬ್ಯಾಂಕ್‌ನ ಎ.ಟಿ.ಎಮ್, ಮೋಟಾರು ಸೈಕಲ್‌ನ ಕೀ ಕೊಟ್ಟು ಪಿರ್ಯಾದಿದಾರರನ್ನು ಅಲ್ಲಿಯೇ ಬಿಟ್ಟು ಹೋಗಿರುತ್ತಾರೆ.

ದಿನಾಂಕ: 04-11-2026 ರಂದು ಪಿರ್ಯಾದುದಾರರು ಕೆಲಸ ಮುಗಿಸಿ ರಾತ್ರಿ 8-00 ಗಂಟೆಗೆ ಅವರ ಮೋಟಾರು ಸೈಕಲ್ ನಲ್ಲಿ ಆರ್.ಟಿ.ಓ ಬಳಿ ಬಂದು ಮೋಟಾರು ಸೈಕಲ್‌ನ್ನು ನಿಲ್ಲಿಸಿ ಎಂದಿನಂತೆ ವಾಕಿಂಗ್ ಮಾಡುತ್ತಾ, ಆಯಾಸಗೊಂಡು ನೆಹರು ವೈದಾನದ ಹೊರಗಡೆ ನಿಂತುಕೊಂಡಿರುವಾಗ, ರಾತ್ರಿ 9-15 ಗಂಟೆಗೆ ಹೊಯ್ಸಳ ವಾಹನದಲ್ಲಿ ಬಂದ ಶಿವರಾಜ್ ಮತ್ತು ಇನ್ನೊಬ್ಬ ಪೊಲೀಸ್ ಸಿಬ್ಬಂದಿಯವರು ಪಿರ್ಯಾದುದಾರರ ಬಳಿ ಬಂದು, ಹೊಯ್ಸಳ ವಾಹನದ ಬಳಿ ಕರೆದು, ಪಿರ್ಯಾದುದಾರರು ಅವರ ಬಳಿ ಹೋದಾಗ, ಪಿರ್ಯಾದಿದಾರರ ಮೊಬೈಲ್ ಫೋನು ಮತ್ತು ಮೋಟಾರು ಸೈಕಲ್‌ನ ಕೀಯನ್ನು ಪಿರ್ಯಾದಿದಾರರಿಂದ ತೆಗೆದುಕೊಂಡು ಪಿರ್ಯಾದಿದಾರರನ್ನು ಹೊಯ್ಸಳ ವಾಹನದಲ್ಲಿ ಬಲತ್ಕಾರವಾಗಿ ಕುಳ್ಳಿರಿಸಿ, ಹೊಯ್ಸಳ ವಾಹನದ ಚಾಲಕರಾಗಿದ್ದ ಶಿವರಾಜ್ ಪಿರ್ಯಾದಿದಾರರಲ್ಲಿ ನೀನು ಫೈನ್ ಕಟ್ಟಬೇಕು ಎಂದು ಹೇಳಿದಾಗ, ನನ್ನಲ್ಲಿ ಹಣ ಇಲ್ಲ ನಾನು ಯಾಕೆ ಫೈನ್ ಕಟ್ಟಬೇಕು ಎಂದು ಕೇಳಿದೆನು. ಆನಂತರ ಪಿರ್ಯಾದಿದಾರರನ್ನು ಫಿಝಾ ಮಾಲ್ ವರೆಗೆ ಕರೆದುಕೊಂಡು ಹೋಗಿ, ವಾಪಾಸು ಪಿರ್ಯಾದಿದಾರರು ಮೋಟಾರು ಸೈಕಲ್ ನಿಲ್ಲಿಸಿದ ಸ್ಥಳಕ್ಕೆ ಕರೆದುಕೊಂಡು ಬಂದು ಅವರ ಮೊಬೈಲ್ ಫೋನು ನೀಡಿ, ನೀನು ನಾಳೆ ಬೆಳಿಗ್ಗೆ 10-00 ಗಂಟೆಗೆ ಪೊಲೀಸ್ ಠಾಣೆಗೆ ಬಾ ಎಂದು ಹೇಳಿ, ಪಿರ್ಯಾದಿದಾರರ ಮೊಬೈಲ್ ನಂಬ್ರ ಪಡೆದು, ಮೋಟಾರು ಸೈಕಲ್‌ನ್ನು ತೆಗೆದುಕೊಂಡು ಹೋಗುತ್ತಾರೆ. ಅವರು ಹೋದ ನಂತರ ಹೊಯ್ಸಳ ವಾಹನದ ಚಾಲಕರಾಗಿದ್ದ ಶಿವರಾಜ್ ರವರು ಪಿರ್ಯಾದಿದಾರರ ಬಳಿ ಬಂದು ಹಣ ಕೊಡು ನಿನ್ನ ಮೋಟಾರು ಸೈಕಲ್ ಬಿಡುತ್ತೇನೆ. ಎಂದು ಹೇಳಿದಾಗ, ಪಿರ್ಯಾದುದಾರರು ಹಣ ನೀಡುವುದಿಲ್ಲ ಪೊಲೀಸ್ ಸ್ಟೇಷನ್‌ಗೆ ಬರುತ್ತೇನೆ. ಎಂದು ಹೇಳಿದಾಗ, ಶಿವರಾಜ್ ರವರು ಹೊಯ್ಸಳ ವಾಹನವನ್ನು ಚಾಲಾಯಿಸಿಕೊಂಡು ಹೋಗಿರುತ್ತಾರೆ.ನಂತರ ರಾತ್ರಿ 10-38 ಗಂಟೆಗೆ 6363612863 ನೇ ನಂಬ್ರ ದಿಂದ ಉಮನಾಥ ರವರು ಕರೆ ಮಾಡಿ ಮೋಟರ್ ಸೈಕಲ್ ನನ್ನು ತೆಗೆದುಕೊಂಡು ಹೋಗು ಎಂದು ಕರೆ ಮಾಡಿ ತಿಳಿಸಿರುತ್ತಾರೆ. ಅವಾಗ ಪಿರ್ಯಾದುದಾರರಿಗೆ ರಾತ್ರಿ 9-15 ಗಂಟೆಗೆ ಹೊಯ್ಸಳ ವಾಹನದಲ್ಲಿ ಬಂದ ಶಿವರಾಜ್ ಮತ್ತು ಇನ್ನೊಬ್ಬ ಪೊಲೀಸ್ ಸಿಬ್ಬಂದಿಯವರ ಹೆಸರು ಉಮನಾಥ್ ಎಂಬುದಾಗಿ ತಿಳಿಯಿತು

ಪಿರ್ಯಾದುದಾರರಿಗೆ ವಿನಾ ಕಾರಣ ಅವಾಚ್ಯ ಶಬ್ದಗಳಿಂದ ಬೈದು, ಬೆದರಿಕೆ ಒಡ್ಡಿ ಬಲತ್ಕಾರವಾಗಿ ನಗದು ಹಣವನ್ನು ಕಸಿದುಕೊಂಡ ಪೊಲೀಸ್ ಸಿಬ್ಬಂದಿಗಳಾದ ಶಿವರಾಜ್ ,ಹಿರಣ್ಣ ಬೆನ್ನಿ ಮತ್ತು ಉಮನಾಥ್ ರವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂಬಿತ್ಯಾದಿ ಸಾರಾಂಶ.

11. (a) ತೆಗೆದುಕೊಂಡ ಕ್ರಮ : Investigation

(b) ಪ್ರ.ವ.ವರದಿಯನ್ನು ಪಿರ್ಯಾದಿಯವರಿಗೆ ಆವರದೆ ಭಾಷೆಯಲ್ಲಿ ವಿವರಿಸಿ, ಓದಿ ಹೇಳಲಾಗಿದೆ ಅದರ ಪ್ರತಿಯನ್ನು ಪುಕಟ್ಟೆಯಾಗಿ ಕೊಡಲಾಗಿದೆ? : Yes

(c) ಪೊಲೀಸ್ ಅಧಿಕಾರಿಯು ತನಿಖೆಗೆ ಸ್ಥಳಕ್ಕೆ ಧಾವಿಸದಿದ್ದಲ್ಲಿ ಅಥವಾ ತನಿಖೆ ಮಾಡಲು ನಿರಾಕರಿಸಿದಲ್ಲಿ ಕಲಂ 157 ಸಿ.ಆರ್.ಪಿ.ಸಿ./176 ಬಿಎನ್‌ಎಸ್‌ಎಸ್ ಕಲಂ (ಎ) ಅಥವಾ (ಬಿ) ಯಡಿ ಕಾರಣವನ್ನು ದಾಖಲಿಸಬೇಕು :

investigation

12. ಪಿರ್ಯಾದಿಯ ಸಹಿ/ಹೆಬ್ಬೆರೆಳಿನ ಗುರುತು :

13. ನ್ಯಾಯಾಲಯಕ್ಕೆ ಕಳುಹಿಸಿದ ದಿನಾಂಕ ಮತ್ತು ಸಮಯ : 05/11/2026 19:00:00

14. ನ್ಯಾಯಾಲಯಕ್ಕೆ ತೆಗೆದುಕೊಂಡು ಹೋದ ಪಿ.ಸಿ./ ಹೆಚ್.ಸಿ : PAVAN KUMAR J K - HC, 715

ಓದಿ ಹೇಳಲಾಗಿ ಕೇಳಲಾಗಿ ಸರಿಯಿದೆ

ದಿನಾಂಕ ಮತ್ತು ಸಮಯ : 05/11/2026 18:55:00

ಠಾಣಾಧಿಕಾರಿಯ ಸಹಿ

RAGHAVENDRA M

PI

ಪ್ರತಿಗಳು :

© ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ. ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ